# ✳ ವೇದಾಂತದ ಮೂರು ತತ್ತ್ವಸಿದ್ಧಾಂತಗಳು ಹಾಗೂ ✳
# ಶ್ರೀರಾಮಕೃಷ್ಣರ ಸಮನ್ವಯ ಸಿದ್ಧಾಂತ - ೨

**ಸ್ವಾಮಿ ರಾಮಕೃಷ್ಣಾನಂದ**

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಜೀವಿಗಳು ಹುಟ್ಟು-ಸಾವಿನ ಸಂಸಾರ ಚಕ್ರಕ್ಕೆ ಬಂದು ಬೀಳದೇ ಇರುವ ಸ್ಥಿತಿಯನ್ನೇ ಈ ಮೂವರು ಮಹಾತ್ಮರೂ (**ಶ್ರೀಶಂಕರಾಚಾರ್ಯರು, ಶ್ರೀರಾಮಾನುಜಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರು**) ತಮ್ಮ ಸಿದ್ಧಾಂತದ ಗುರಿಯಾಗಿ ಹೊಂದಿದ್ದರು. ಈ ಸ್ಥಿತಿಯನ್ನು ಹೊಂದುವ ಮಾರ್ಗದ ವಿಷಯದಲ್ಲಿ ಮಾತ್ರ ಅವರಲ್ಲಿ ಭಿನ್ನಾಭಿಪ್ರಾಯವಿದ್ದಿತು. ಅವರು ತೋರಿದ ದಾರಿಗಳು ಬೇರೆಬೇರೆಯೇ ಎಂಬುದು ಸ್ಪಷ್ಟವಾಗಿಯೇ ಇದೆ. ಆದರೂ ಈ ಮಾರ್ಗಗಳು ಜಗತ್ತಿನ ಮಿತಿಗಳನ್ನು ಮೀರಿನಿಂತಿರುವ ಜಗತ್ತಿನ ಒಡೆಯನಲ್ಲಿಗೆ ಜೀವಿಯನ್ನು ಕರೆದೊಯ್ಯಬಲ್ಲವು. ಅವನನ್ನು ಪಡೆದುಕೊಂಡಾಗ ಮಾತ್ರ ಮೂರು ವಿಧವಾದ ದುಃಖಗಳೂ ಸಂಪೂರ್ಣವಾಗಿ ನಾಶವಾಗುವುದು. ಸಂಸಾರಸಾಗರದ ದಡವನ್ನು ದಾಟಲು ಯಾರಿಂದ ತಾನೇ ಸಾಧ್ಯ? ಉಪನಿಷತ್ತುಗಳು ಹೇಳುವಂತೆ,

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಾಮ್॥

"ಗುರುವಿನಲ್ಲಿ ಹೊಂದಿರುವಂತಹ ಪರಾಭಕ್ತಿಯಷ್ಟೇ ಭಕ್ತಿಯನ್ನು ದೇವರಲ್ಲೂ ಯಾರು ಹೊಂದಿರುವನೋ ಅಂತಹ ಮಹಾತ್ಮನಿಗೆ ತತ್ತ್ವಗಳು (ಅವುಗಳ ಸೂಕ್ಷ್ಮ ಅಂತರಾರ್ಥಗಳು) ತಮ್ಮನ್ನು ತಾವೇ ತೋರಿಸಿಕೊಳ್ಳುತ್ತವೆ."

ಭಗವದ್ಗೀತೆಯಲ್ಲಿ ಹೇಳಿರುವಂತೆ:

ನಿರ್ಮಾನಮೋಹಾ ಜಿತಸಂಗದೋಷಾ
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ
ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥

"ಅಭಿಮಾನ, ಮೋಹಗಳಿಲ್ಲದ, ಸಂಗದೋಷವಿಲ್ಲದ, ಆಸೆಗಳನ್ನು ಕಳೆದುಕೊಂಡಿರುವ, ಸುಖ-ದುಃಖ, ಮಾನ-ಅಪಮಾನ ಮೊದಲಾದ ದ್ವಂದ್ವ ಭಾವಗಳನ್ನು ಮೀರಿರುವ ಅಧ್ಯಾತ್ಮನಿತ್ಯರಾದವರು ಎಂದೆಂದಿಗೂ ನಾಶಹೊಂದದ ಆ ಸ್ಥಾನವನ್ನು ಪಡೆಯುತ್ತಾರೆ."

ಪ್ರಪಂಚವನ್ನು ಯಾರು ಗೆಲ್ಲುತ್ತಾರೆ? ಮನಸ್ಸನ್ನು ಗೆದ್ದಿರುವವರು. ಏಕೆಂದರೆ ಪ್ರಪಂಚವು ಇಂದ್ರಿಯಗಳಿಂದ ಹುಟ್ಟಿದೆ ಮತ್ತು ಆಗಿದೆ. ಉಪನಿಷತ್ತುಗಳು ಹೇಳುವಂತೆ,

ಇಂದ್ರಿಯೇಭ್ಯಃ ಪರಾ ಹ್ಯರ್ಥಾಃ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥
ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ॥

"ಇಂದ್ರಿಯಗಳಿಗಿಂತಲೂ, ಇಂದ್ರಿಯಗಳು ಗ್ರಹಿಸುವ ವಿಷಯಗಳಿಗಿಂತಲೂ ಮನಸ್ಸು ಮೇಲಿನದು. ಮನಸ್ಸಿಗಿಂತಲೂ ಮೇಲಿನದು ಬುದ್ಧಿ. ಬುದ್ಧಿಗಿಂತಲೂ ಮಹತ್ತಾದುದು ಆತ್ಮ. ಅದಕ್ಕಿಂತಲೂ ಮೇಲಿನದು ಅವ್ಯಕ್ತ. ಅದಕ್ಕಿಂತ ಮೇಲಿನದು ಪುರುಷ. ಅದನ್ನು ಮೀರಿದ್ದು ಯಾವುದೂ ಇಲ್ಲ. ಅದೇ ಅಂತಿಮ ನೆಲೆ"—ಎಂದು ಉಪನಿಷತ್ತು ತೋರಿಸಿರುವ ಮೆಟ್ಟಿಲುಗಳ ಮೂಲಕ ಹಂತಹಂತವಾಗಿ ಏರುತ್ತಾ ಹೋಗಿ ಸಂಸಾರಸಾಗರದ ಪಾರವನ್ನು ಸೇರುತ್ತಾರೆ.

**ತದ್ವಿಷ್ಣೋಃ ಪರಮಂ ಪದಂ**—"ಅದೇ ವಿಷ್ಣುವಿನ ಪರಂಧಾಮ." **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ**— ಶಾಂತನೂ ದಾಂತನೂ ಆದ, ಇಂದ್ರಿಯಗಳ ಎಲ್ಲಾ ಕೆಲಸಗಳನ್ನೂ ನಿಲ್ಲಿಸಿರುವ ಮಹಾತ್ಮನು "ಮಾತು ಮನಸ್ಸುಗಳೂ ಸಹ ತಲುಪಲಾಗದೆ ಎಲ್ಲಿಂದ ಹಿಂದಿರುಗುವವವೋ" ಅಂತಹ ಸ್ಥಾನವನ್ನು ಹೊಂದುತ್ತಾನೆ.

ತನ್ನ ಸಾಧನಶಕ್ತಿಯಿಂದಲೋ, ಈಶ್ವರನ ಕೃಪೆಯಿಂದಲೋ, ಭಕ್ತಿಯಿಂದಲೋ, ಜ್ಞಾನದಿಂದಲೋ—ಕಾರಣ ಯಾವುದೇ ಇರಲಿ, ಇಂದ್ರಿಯಗಳನ್ನು ಮೆಟ್ಟುವುದರಿಂದಲೇ, ದುಃಖವನ್ನುಂಟುಮಾಡುವ ಎಲ್ಲಾ ಬಂಧಗಳಿಂದ ಬಿಡುಗಡೆ. ಈ ವಿಷಯದಲ್ಲಿ ಕೇವಲ ನಮ್ಮ ಋಷಿಗಳಲ್ಲಿ ಒಮ್ಮತ ಇರುವುದಷ್ಟೇ ಅಲ್ಲ, ಹೂಣ, ಯವನರುಗಳಂಥ ವಿದೇಶೀಯರಲ್ಲೂ ಏಕಾಭಿಪ್ರಾಯ ಇದೆ. ಸತ್ತ್ವ, ರಜಸ್ಸು, ತಮಸ್ಸು ಗುಣಗಳ ಹೆಚ್ಚೂ ಕಡಿಮೆ ಬೆರಕೆಯಿಂದ ಮನುಷ್ಯರಿಗೆ ದಾರಿಗಳು ಬೇರೆ ಬೇರೆ ಆಗುತ್ತವೆ. ಆದರೆ ಗುರಿ ಮಾತ್ರ ಒಂದೇ.

(ಶಿವಮಹಿಮ್ನಃ ಸ್ತೋತ್ರದಲ್ಲಿ ಹೇಳಿರುವಂತೆ) ವೇದಗಳು, ಸಾಂಖ್ಯ, ಯೋಗ ಪಶುಪತಿಮತ, ವೈಷ್ಣವ.. ಎಂದು ಮೋಕ್ಷಕ್ಕೆ ಅನೇಕ ದಾರಿಗಳು ಇವೆ. ಇದು ಶ್ರೇಷ್ಠ, ಇದು ಪಥ್ಯ ಎಂದು ಬೇರೆ ಬೇರೆ ಅಭಿರುಚಿಗೆ ತಕ್ಕಂತೆ ಬೇರೆ ಬೇರೆ ಮಾರ್ಗವನ್ನು ಆಶ್ರಯಿಸಿರುವ ಮನುಷ್ಯರಿಗೆ, ನೀರಿಗೆಲ್ಲಾ ಸಮುದ್ರವೇ ಅಂತಿಮ ಗತಿ ಹೇಗೋ ಹಾಗೆ, ಸೇರಬೇಕಾದ ಒಂದೇ ನೆಲೆ ಭಗವಂತನೇ. ಅಭಿರುಚಿಗೆ ಅನುಗುಣವಾಗಿ ಇರುವ ದಾರಿಗಳು, ಬೇರೆ ಬೇರೆ ಎಂಬಂತೆ ತೋರಿದರೂ, ಗುರಿ ಒಂದೇ ಆದುದರಿಂದ ಆ ಎಲ್ಲಾ ಮಾರ್ಗಗಳೂ ಉತ್ತಮವಾದುವೇ ಎಂಬುದು ಸ್ಪಷ್ಟ. ವೃತ್ತದಿಂದ ಹೊರಟ ಎಲ್ಲಾ ರೇಖೆಗಳೂ ಕೇಂದ್ರವನ್ನೇ ಸೇರುವಂತೆ, ಬೇರೆ ಬೇರೆ ಧರ್ಮಮಾರ್ಗಗಳೂ ಕೂಡ ಒಬ್ಬನೇ ವಿಭುವನ್ನು ಸೇರುತ್ತವೆ. ಅವನೇ ಸೃಷ್ಟಿಸ್ಥಿತಿ ಲಯಗಳನ್ನು ಉಂಟುಮಾಡುವವನು, ಎಲ್ಲ ಲೋಕಗಳಿಗೆ ಗುರು, ಚರಾಚರಗಳಿಗೆ ತಂದೆ, ದುಃಖವೆಂಬ ಕತ್ತಲೆಗೆ ಸೂರ್ಯ, ಎಲ್ಲ ಜೀವಿಗಳ ಹೃದಯಾಂತರಾಳದಲ್ಲಿ ವಾಸಿಸುವವನು, ಎಲ್ಲವನ್ನೂ ಮಾಡುವವನು ಹಾಗೂ ಎಲ್ಲವನ್ನೂ ವ್ಯಾಪಿಸಿರುವವನೂ ಅವನೇ. ಭಗವಂತನೇ ಹೀಗೆ ಹೇಳಿರುವನು—

**ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥**

"ಯಾರು ಯಾರು ಯಾವ ಯಾವ ಭಾವದಿಂದ ನನ್ನನ್ನು ಆಶ್ರಯಿಸುವರೋ ಅವರವರಿಗೆ ಹಾಗೆಯೇ ಅನುಗ್ರಹಿಸುತ್ತೇನೆ. ಪಾರ್ಥ! ಎಲ್ಲಾ ರೀತಿಯಿಂದಲೂ ಮನುಷ್ಯರು ನನ್ನ ದಾರಿಯನ್ನೇ ಅನುಸರಿಸುತ್ತಾರೆ." ಭಕ್ತರನ್ನು ಅನುಗ್ರಹಿಸಲು ಭಗವಂತನು ಅನೇಕ ರೂಪಗಳನ್ನು ತಾಳುತ್ತಾನೆ. ಒಂದೇ ಕಾಲದಲ್ಲಿ ಅವನು ಸಾಕಾರನೂ ಆಗಿರಬಲ್ಲ, ನಿರಾಕಾರನೂ ಆಗಿರಬಲ್ಲ. ಭಗವಂತನೇ ಹೇಳಿರುವಂತೆ—**ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್** "ಮಾಡುವವನೂ, ಮಾಡದವನೂ, ಬದಲಾವಣೆಯಿಲ್ಲದವನೂ" ಆಗಿರಬಲ್ಲ. ಇಂತಹ ಪರಮಾತ್ಮನ ಪಾದಮೂಲವನ್ನು ಸೇರಲು ಭಕ್ತಿಯೊಂದೇ ಸುಲಭ ಸಾಧನ.

**ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ।**
**ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್॥**
**ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾಃ ಭಕ್ತಾ ರಾಜರ್ಷಯಸ್ತಥಾ ।**
**ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ ॥**

"ನನ್ನನ್ನು ಆಶ್ರಯಿಸಿದವರು, ಪಾಪಿಗಳು, ಸ್ತ್ರೀಯರು, ವೈಶ್ಯರು, ಶೂದ್ರರೇ ಆಗಿದ್ದರೂ ಪರಮಗತಿಯನ್ನು ಹೊಂದುವರು. ಹಾಗಿರುವಾಗ ಪುಣ್ಯವಂತರೂ, ಬ್ರಾಹ್ಮಣರೂ (ಶುದ್ಧ ಜೀವನವನ್ನು ನಡೆಸುವ ಧರ್ಮವಂತರು), ಭಕ್ತರೂ, ರಾಜರ್ಷಿಗಳೂ ಆದವರ ಕುರಿತು ಹೇಳುವುದೇನಿದೆ? ಆದುದರಿಂದ ಅನಿತ್ಯವೂ, ಅಸುಖವೂ ಆದ ಈ ಲೋಕದಿಂದ ಏನು ಪ್ರಯೋಜನ? ನನ್ನನ್ನು ಆಶ್ರಯಿಸು."

ಭಕ್ತಿಯ ಮಾರ್ಗವು ಭಾರತದಲ್ಲಿ ಮಾತ್ರ ಇದೆ, ಬೇರೆ ಕಡೆ ಇಲ್ಲವೆಂದಲ್ಲ. ವಿದೇಶೀಯ ಧರ್ಮದವರೂ ಭಕ್ತಿಮಾರ್ಗವನ್ನು ಅನುಸರಿಸುವರು. ಬೌದ್ಧರಲ್ಲೂ ಬುದ್ಧನ ಮೇಲಿನ ಭಕ್ತಿ ಕಂಡುಬರುತ್ತದೆ.

**ನಿಂದಸಿ ಯಜ್ಞವಿಧೇರಹಹ ಶ್ರುತಿಜಾತಂ ।**
**ಸದಯ-ಹೃದಯ-ದರ್ಶಿತ-ಪಶುಘಾತಂ ।**
**ಕೇಶವ-ಧೃತ-ಬುದ್ಧ-ಶರೀರ ಜಯ ಜಗದೀಶ ಹರೇ ॥**

"ಕರುಣೆಯಿಂದ ಕೂಡಿದ ಹೃದಯವುಳ್ಳವನಾಗಿ, ಪ್ರಾಣಿಹಿಂಸೆಯನ್ನು ವಿಧಿಸುವ ವೇದದಲ್ಲಿ ಹೇಳಿರುವ ಯಜ್ಞಕ್ರಮಗಳನ್ನು ನಿಂದಿಸಿದ, ಬುದ್ಧಶರೀರವನ್ನು ಧರಿಸಿರುವ ಕೇಶವನೆ, ನಿನಗೆ ಜಯವಾಗಲಿ" ಎಂಬಲ್ಲಿ ಶ್ರೀ ಜಯದೇವ ಕವಿಯು ಬುದ್ಧನೂ ಒಬ್ಬ ಅವತಾರವೆಂದು ಒಪ್ಪಿಕೊಂಡಿದ್ದಾನೆ. ಈ ವಿಷಯವನ್ನು ಶ್ರೀಮದ್ಭಾಗವತ ಮೊದಲಾದ ಪುರಾಣಗಳು ಮೊದಲೇ ಒಪ್ಪಿಕೊಂಡಿವೆ. ಆದುದರಿಂದ ಎಲ್ಲಾ ಧರ್ಮಗಳೂ ಭಗವಂತನ ಪಾದವನ್ನು ತಲುಪಲು ಸಮರ್ಥವಾಗಿವೆ. ಆದರೆ **ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ**—"ತಮ್ಮ ತಮ್ಮ ಧರ್ಮದಲ್ಲೇ ನೆಲೆಯಾಗಿರುವುದೇ ಶ್ರೇಷ್ಠ ಪರಧರ್ಮವೆಂಬುದು ಭಯವನ್ನು ಹುಟ್ಟಿಸುವಂತಹುದು" ಎಂಬ ಮಾತನ್ನು ಮರೆಯಬಾರದು.

ಹೀಗಿರುವಾಗ ಯಾರು ಕೇವಲ ತನ್ನ ಧರ್ಮವೇ ಸತ್ಯ, ಶ್ರೇಷ್ಠ, ಉತ್ತಮ ಹಾಗೂ ಬೇರೆಯ ಧರ್ಮಗಳೆಲ್ಲ ಅಸತ್ಯ, ಅಧಮ ಎಂದು ನಂಬುತ್ತಾನೋ ಅಥವಾ ಹಾಗೆ ಸಾಧಿಸಲು ಯತ್ನಿಸುತ್ತಾನೋ, ಅಂತಹ ಅಜ್ಞಾನಿಯು ನಿಜವಾಗಲೂ ತಿರಸ್ಕಾರಯೋಗ್ಯನೇ ಸರಿ. ಗರ್ವದಿಂದ ಕುರುಡನಾಗಿ, ದುರಭಿಮಾನದಿಂದ ಭ್ರಾಂತನಾಗಿ ಇಂತಹವನು ಕೇವಲ ತಾನು ಮಾತ್ರ ಭಗವಂತನಿಗೆ ಅತ್ಯಂತ ಪ್ರಿಯನಾದವನು, "ನನ್ನ ಸಮಾನರು ಬೇರೆ ಯಾರಿದ್ದಾರೆ" ಎಂದು ತಿಳಿದುಕೊಳ್ಳುತ್ತಾನೆ. ಭೂಮಿಯಲ್ಲಿ ಎಲ್ಲೆಡೆಯೂ ಇದ್ದ ಈ ರೀತಿಯ ನಯವಂಚಕರನ್ನೂ, ಸಂಕುಚಿತಬುದ್ಧಿಯವರನ್ನೂ, ಒಡಹುಟ್ಟಿದವರ ರಕ್ತವನ್ನೇ ಹೀರುವ ಕ್ರೂರಿಗಳಾದ ನರಪಶುಗಳನ್ನೂ ಉದ್ಧಾರಮಾಡುವ ಅಪೇಕ್ಷೆಯಿಂದ ಶ್ರೀಮತ್ ಸ್ವಾಮಿ ವಿವೇಕಾನಂದರ ಗುರುಗಳೂ, ಋಷಿಪುಂಗವರೂ, ಅನುಪಮ ಜ್ಞಾನ-ಭಕ್ತಿ ವೈರಾಗ್ಯಗಳ ಸಂಗಮವಾಗಿದ್ದ, ಪುರುಷಶ್ರೇಷ್ಠರೂ ಆದ ಶ್ರೀರಾಮಕೃಷ್ಣರು ವಂಗದೇಶದಲ್ಲಿ ಅವತರಿಸಿದರು.

ಶ್ರೀರಾಮಕೃಷ್ಣರು ಕೇಶವ ಚಂದ್ರ ಸೇನನಿಗೆ ಸರ್ವಧರ್ಮ ಸಮನ್ವಯವನ್ನು ಎತ್ತಿತೋರಿಸು ತ್ತಿರುವುದು.

ಈ ಚಿತ್ರವನ್ನು ಶ್ರೀರಾಮಕೃಷ್ಣರ ಜೀವಿತಕಾಲದಲ್ಲಿಯೇ (೧೮೮೨)ರಲ್ಲಿ ರಚಿಸಲಾಯಿತು.



ಬಹುಜನರ ಹಿತ, ಬಹುಜನರ ಸುಖಕ್ಕಾಗಿಯೇ ಇವರು ಅವತರಿಸಿದ್ದು. ಸತ್ತ್ವ-ರಜಸ್ಸು-ತಮೋಗುಣಗಳ ಭೇದದಿಂದ ವಿಭಿನ್ನ ಆಸಕ್ತಿಗಳನ್ನು ಹೊಂದಿರುವ, ಆ ಕಾರಣದಿಂದಲೇ ಬೇರೆ ಬೇರೆ ಮಾರ್ಗವನ್ನು ಅನುಸರಿಸುವವರ ಅನುಕೂಲ ಕ್ಕಾಗಿ ಅನೇಕ ವಿಧದ ಧರ್ಮಗಳು ಇವೆ, ಇರಲೇಬೇಕು, ಅದು ಒಳ್ಳೆಯದೇ ಎಂಬುದನ್ನು ಈ ಮಹಾತ್ಮರು ತಮ್ಮ ಅನುಭವದಿಂದ ನಿಸ್ಸಂದೇಹವಾಗಿ ದೃಢಪಡಿಸಿರುವರು. ಸಾರ್ವತ್ರಿಕ ಹಾಗೂ ವಿಶ್ವವ್ಯಾಪಿ ಸತ್ಯವನ್ನು ಆಧರಿಸಿರುವ ಸನಾತನ ಧರ್ಮವು ಎಲ್ಲಾ ಕಾಲದಲ್ಲೂ ಅತ್ಯುತ್ತಮವಾದುದು, ಅದು ಸಾಮಾನ್ಯ ಜನರಿಗೂ ಅನುಕೂಲವಾಗುವಂತಹುದು—ಎಂಬ ಅಂಶವನ್ನು ಅವರು ಮನಗಂಡರು. ಸಂಕುಚಿತ ಮನೋಧರ್ಮವುಳ್ಳವರು, "ಈ ಸನಾತನ ಧರ್ಮವು ವೇದ ಮೂಲವಾದುದು. ಇದನ್ನು ಯಾವುದೋ ಒಂದು ಸಂಪ್ರ ದಾಯದವರ ಉಪಯೋಗಕ್ಕಾಗಿ ಭಗವಂತನು ಸೃಷ್ಟಿಸಿರುವನೇ ಹೊರತು ಇದು ಎಲ್ಲರಿಗಾಗಿ ಅಲ್ಲ" ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಶಾಸ್ತ್ರಗಳ ಸರಿಯಾದ ತಿಳಿವಳಿಕೆಯಿಲ್ಲ ದಿರುವುದೇ ಈ ರೀತಿಯ ಸಂಕುಚಿತ ಮನೋಭಾವನೆಗೆ ಕಾರಣ. ಶಾಸ್ತ್ರಗಳನ್ನು ಸರಿಯಾಗಿ ಅಧ್ಯಯನ ಮಾಡಿದಲ್ಲಿ, ಅದರ ಒಳಾರ್ಥವನ್ನು ಗ್ರಹಿಸಿದಲ್ಲಿ, ಈ ಅಪಸಿದ್ಧಾಂತದಲ್ಲಿ ಯಾರಿಗೂ ಅಭಿರುಚಿಯುಂಟಾಗದು.

ತಾವು ಶ್ರೇಷ್ಠ ಪಂಡಿತರು, ಎಲ್ಲಾ ಶಾಸ್ತ್ರಗಳಲ್ಲಿ ನಿಪುಣರು. ಇತರರ ದುಃಖವನ್ನು ಸಹಿಸದವರು ಎಂದು ತಿಳಿದೇ ದಾಸ ನಾದ ನಾನು ತಮ್ಮ ಬಳಿಗೆ ಇಂದು ಬಂದಿರುವೆನು. ಎಲ್ಲಾ ಲೋಕಗಳಿಗೆ ಹಿತವನ್ನು ಮಾಡಬೇಕೆಂಬ ಆಸೆಯಿದ್ದ ಪೂರ್ವಜರ ಆರ್ಯ ವಂಶದಲ್ಲಿ ಜನಿಸಿದವರಾಗಿದ್ದರೂ, ಈಗಿನವರು ಶಾಸ್ತ್ರಗಳ ಅಧ್ಯಯನವಿಲ್ಲದೆ ಸಣ್ಣ ಬುದ್ಧಿ, ಸಂಕುಚಿತ ಮನಸ್ಸುಳ್ಳವರಾಗಿ ಈ ದುಸ್ಥಿತಿಗೆ ಇಳಿದಿದ್ದಾರೆ. ತಮ್ಮ ಕರುಣಾಕಟಾಕ್ಷದಿಂದಲೇ ಅವರಲ್ಲಿ ಒಳ್ಳೆ ಬುದ್ಧಿ ಯುಂಟಾಗುವುದೆಂದು ತಿಳಿದು ನಾನು ಇಂದು ತಮ್ಮಲ್ಲಿ ಅವರಿಗೆ ಸ್ವಾಧ್ಯಾಯ ಮತ್ತು ಪ್ರವಚನಗಳ ಮಹತ್ವವನ್ನು ತಿಳಿಯಪಡಿಸಬೇಕೆಂದು ಪ್ರಾರ್ಥಿಸುವೆ. ದಾನದಿಂದಲೇ ವಿದ್ಯೆ ಹೆಚ್ಚು ಸಂಗ್ರಹವಾಗುವುದು. ತಪ್ಪು ತಿಳಿವಳಿಕೆ ಹೊಂದಿರುವವರು ಕರುಣೆಗೆ, ಕ್ಷಮೆಗೆ ಅರ್ಹರು. ಅವರಿಗಾಗಿ ತಮ್ಮ ಕೃಪಾ ಕಟಾಕ್ಷ ವನ್ನು ಪ್ರಾರ್ಥಿಸುತ್ತಾ ನಾನು ಮೌನವಾಗುವೆನು.

**ಹರಿಃ ಓಂ**

## ಆಶ್ರಮದ ವಿಶೇಷ ಉತ್ಸವದ ದಿನಗಳು

**ಆಗಸ್ಟ್ ೨೦೦೬**

| | | |
|---|---|---|
| ೦೫ | ಏಕಾದಶಿ | ಶನಿವಾರ |
| ೦೯ | ಸ್ವಾಮಿ ನಿರಂಜನಾನಂದ ಜಯಂತಿ | ಬುಧವಾರ |
| ೧೫ | ಶ್ರೀಕೃಷ್ಣ ಜನ್ಮಾಷ್ಟಮಿ | ಮಂಗಳವಾರ |
| ೧೯ | ಏಕಾದಶಿ | ಶನಿವಾರ |
| ೨೨ | ಸ್ವಾಮಿ ಅದ್ವೈತಾನಂದ ಜಯಂತಿ | ಮಂಗಳವಾರ |
| ೨೭ | ಶ್ರೀವಿನಾಯಕ ಚತುರ್ಥಿ | ಭಾನುವಾರ |